**CC 54/2017**
**PW.2**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**
**ದೊಡ್ಡಬಳ್ಳಾಪುರ**
**ಸಿ ಸಿ ನಂ : 54/2017**

**ಪಿ ಡಬ್ಲೂ - 2**
**ಸಿ ಡಬ್ಲೂ - 2**

**ದಿಃ 02.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಹೆಸರು ಃ ಬಿ.ಪಿ. ಸಿದ್ದಲಿಂಗಯ್ಯ**
**ತಂದೆಯ ಹೆಸರು ಃ ಬಸಲಿಂಗಯ್ಯ**
**ವಯಸ್ಸು ಃ 62 ವರ್ಷ**
**ಉದ್ಯೋಗ ಃ ನಿವೃತ್ತ ಮುಖ್ಯ ಶಿಕ್ಷಕರು**
**ವಿಳಾಸ ಃ ಕನಸವಾಡಿ**
**ಮುಖ್ಯ ವಿಚಾರಣೆ ಃ ಸ ಸ ಅ ರವರಿಂದ**

ನಾನು ದಿಃ 10.05.2011 ರಿಂದ ದಿಃ 30.06.2023 ರ ವರೆಗೂ ನಾನು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಚ, ಚಿಕ್ಕಹೆಜ್ಜಾಜಿ ಕಾಲೋನಿ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಮುಖ್ಯ ಶಿಕ್ಷಕ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 09.06.2016 ರಂದು ದೊಡ್ಡಬೆಳವಂಗಲ ಹೋಬಳಿ, ಚಿಕ್ಕಹೆಜ್ಜಾಜಿ ಕಾಲೋನಿಯಲ್ಲಿದ್ದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಸೇರಿದ ಸರ್ವೇ ನಂ. 14 ರಲ್ಲಿನ 4 ಎಕರೆ 28 ಗುಂಟೆ ಜಮೀನಿನಲ್ಲಿ 1 ನೇ ಆರೋಪಿಯು 7 ಗುಂಟೆ ಜಮೀನನ್ನು ಒತ್ತುವರಿ ಮಾಡಿಕೊಂಡು ಅಲ್ಲಿ ಷೆಡ್ಡನ್ನು ನಿರ್ಮಿಸಿಕೊಂಡಿದ್ದರು ಹಾಗೂ 2 ನೇ ಆರೋಪಿಯು 1 ಎಕರೆಯಷ್ಟು ಜಮೀನನ್ನು ಉಳುಮೆ ಮಾಡಿದ್ದನು. ಸದರಿ ಜಮೀನನ್ನು ದಿಃ 26.06.2014 ರ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾನ್ಯ ಜಿಲ್ಲಾಧಿಕಾರಿಗಳು ಜಮೀನನ್ನು ಸರ್ಕಾರಿ ಶಾಲೆಯ ಆಟದ ಮೈದಾನಕ್ಕಾಗಿ ಮಂಜೂರು ಮಾಡಿದ್ದರು. ನಾನು ಆರೋಪಿತರನ್ನು ಪ್ರಶ್ನಿಸಿದಾಗ ಅವರು ನಮ್ಮ ಮೇಲೆ ಗಲಾಟೆ ಮಾಡಿದರು. ನಂತರ ಸದರಿ ವಿಚಾರವನ್ನು ನನ್ನ ಮೇಲಾಧಿಕಾರಿಯಾದ ಚಾಸಾ-1 ರವರಿಗೆ ಲಿಖಿತವಾಗಿ ತಿಳಿಸಿದೆನು. ನಂತರ ಚಾಸಾ-1 ರವರು ದಿಃ 10.06.2016 ರಂದು ದೂರನ್ನು ದಾಖಲಿಸಿರುತ್ತಾರೆ. ನಂತರ ಪೋಲೀಸರು ದಿಃ 18.06.2016 ರಂದು ಸ್ಥಳಕ್ಕೆ ಬಂದು ಸರ್ವೇ ಮಾಡಿದರು. ಸಾಕ್ಷಿಯು ಪಂಚನಾಮೆಯಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಪಂಚನಾಮೆಯನ್ನು ನಿಪಿ-2 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-

2(ಎ) ಎಂದು ಗುರುತಿಸಲಾಯಿತು. ನಿಪಿ-2 ಕ್ಕೆ ಸಹಿಯನ್ನು ಪೋಲೀಸರು ಸ್ಥಳ ಮಹಜರ್ ಗಾಗಿ ಸ್ಥಳಕ್ಕೆ ಬಂದು ಮುಹಜರ್ ಜರುಗಿಸಿ ಅದಕ್ಕೆ ನನ್ನ ಸಹಿಯನ್ನು ಪಡೆದಿರುತ್ತಾರೆ. ಬೆಳಿಗ್ಗೆ 10 ಕ್ಕೆ ಸ್ಥಳಕ್ಕೆ ಬಂದಿದ್ದರು. ಸಮಯ ಈಗ ನೆನಪಾಗುತ್ತಿಲ್ಲ. ಪೋಲೀಸರಿಗೆ ನಾನು ಹೇಳಿಕೆಯನುನ ಕೊಟ್ಟಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. (2 ನೇ ಆರೋಪಿಯು ಈ ದಿನ ಗೈರು ಹಾಜರಿದ್ದು, 2 ನೇ ಆರೋಪಿಯ ಗುರುತಿಸುವಿಕೆಯನ್ನು 2 ನೇ ಆರೋಪಿಯ ಪರ ವಕೀಲರು ಅಲ್ಲಗಳೆದಿರುವುದಿಲ್ಲ.)

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎ.ಎನ್.ಎಸ್., ವಕೀಲರಿಂದ**

ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಚಿಕ್ಕಹೆಜ್ಜಾಜಿ ಕಾಲೋನಿ, ದೊಡ್ಡಬಳ್ಳಾಪುರ ತಾಲ್ಲೂಕು ಸುಮಾರು 30 ವರ್ಷಗಳಿಂದ ಇರುತ್ತದೆ. ಸರ್ವೇ ನಂ. 14 ರಲ್ಲಿ ಸರ್ಕಾರಿ ಶಾಲಾ ಕಟ್ಟಡವನ್ನು ನಿರ್ಮಿಸಿ ಸುಮಾರು 20 ವರ್ಷಗಳಾಗಿರುತ್ತದೆ. ಶಾಲಾ ಕಟ್ಟಡವು ಎಷ್ಟು ಅಳತೆ ಇರುತ್ತದೆ ಎಂದು ಗೊತ್ತಿಲ್ಲ. ನಾನು ಹೋಗುವ ಪೂರ್ವದಲ್ಲಿಯೇ ಸರ್ವೇ ನಂ. 14 ರಲ್ಲಿ ಶಾಲೆಗಾಗಿ 4 ಎಕರೆ 28 ಗುಂಟೆ ಜಮೀನು ಮಂಜೂರಾಗಿತ್ತು. ನಮ್ಮ ಶಾಲಾ ದಾಖಲಾತಿಗಳಲ್ಲಿ 4 ಎಕರೆ 28 ಗುಂಟೆ ಜಮೀನಾದ ಬಗ್ಗೆ ಇದೆ. 2011 ರಲ್ಲಿ ನಾನು ಸದರಿ ಶಾಲೆಗೆ ವರ್ಗಾವಣೆಯಾಗಿ ಬಂದಿದ್ದು ಅಂದಿನಿಂದಲೇ 4 ಎಕರೆ 28 ಗುಂಟೆ ಜಮೀನು ಶಾಲೆಗೆ ಸೇರಿದ್ದಾಗಿತ್ತು. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನಾನು ನೋಡಿಲ್ಲ. ಸಾಕ್ಷಿಯು ಸ್ವತಃ 2014 ರಲ್ಲಿ ಜಮೀನು ಮಂಜೂರಾಗಿತ್ತು, ಅದಕ್ಕೂ ಪೂರ್ವದಲ್ಲಿ ಜಮೀನನ್ನು ಶಾಲೆಗೆ ಬಳಸಿಕೊಳ್ಳಲಾಗುತ್ತಿತ್ತು ಎಂದು ನುಡಿಯುತ್ತಾರೆ. ಸರ್ವೇ ನಂ. 14 ರ ಜಮೀನನ್ನು 2014 ರಲ್ಲಿ ಸರ್ವೇ ಮಾಡಿಸಲಾಗಿತ್ತು. 2014 ರ ನಂತರ ಎರಡು ಬಾರಿ ಜಮೀನನ್ನು ಸರ್ವೇ ಮಾಡಿಸಲಾಗಿತ್ತು. ಸದರಿ ಸರ್ವೇಗಳನ್ನು ಮಾಡುವಂತೆ ನಾನು ಕೋರಿಕೊಂಡಿರಲಿಲ್ಲ. ದಿಃ 10.06.2016 ರಲ್ಲಿ ಸರ್ವೇ ನಂ. 14, 4 ಎಕರೆ 28 ಗುಂಟೆ ಜಮೀನು ಸರ್ಕಾರಿ ಶಾಲೆಗೆ ಸೇರಿದ್ದು ಎಂಬುದಕ್ಕೆ ಯಾವುದೇ ದಾಖಲೆಗಳು ಇರಲಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯ ವಿರುದ್ಧ 2015 ರಲ್ಲಿ ಇದೇ ಜಮೀನಿಗೆ ಸಂಬಂಧಿಸಿದಂತೆ ನಾನು ದೂರನ್ನು ಪೋಲೀಸರಲ್ಲಿ ದಾಖಲಿಸಿರುತ್ತೇನೆ ಎಂದರೆ ಸರಿ. ಸದರಿ ಪ್ರಕರಣವು ಕ್ರೈಂ ನಂ. 241/2015 ರಂತೆ ದಾಖಲಿಸಲಾಗಿತ್ತು ಎಂದರೆ ಸಾಕ್ಷಿಯು ಪ್ರಕರಣದ ಸಂಖ್ಯೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಕ್ರೈಂ ನಂಬರ್ ನ ಪ್ರಕರಣವು ಸಿ.ಸಿ. 1425/2016 ಎಂದು ದಾಖಲಿಸಲಾಗಿತ್ತು ಎಂದರೆ ನನಗೆ ನೆನಪಿಲ್ಲ. ಸದರಿ ಪ್ರಕರಣದಲ್ಲಿ ನಾನು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿ. ಸರ್ವೇ ನಂ. 14 ರಲ್ಲಿ

1ನೇ ಆರೋಪಿಗೆ 18 ಗುಂಟೆ ಜಮೀನು ಮಂಜೂರಾಗಿತ್ತು ಎಂದರೆ ಸರಿ. ಸದರಿ ಜಮೀನಿನಲ್ಲಿ ಮಂಜೂರಾದಾಗಿನಿಂದಲೂ 1ನೇ ಆರೋಪಿ ಉಳುಮೆ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ನ್ಯಾಯಾಲಯದ ಆದೇಶದ ಪಡೆದು ಉಳುಮೆ ಮಾಡುತ್ತಿದ್ದಾರೆ ಅದಕ್ಕೂ ಮುಂಚೆ ಮಾಡುತ್ತಿರಲಿಲ್ಲ ಎಂದು ನುಡಿಯುತ್ತಾರೆ. 1ನೇ ಆರೋಪಿ ಅವರಿಗೆ ಮಂಜೂರಾದ ಜಮೀನಿನಲ್ಲಿ ಉಳುವೆ ಮಾಡುತ್ತಿದ್ದು, ಯಾವುದೇ ಒತ್ತುವರಿ ಮಾಡಿಲ್ಲ ಎಂದರೆ ಅವರಿಗೆ ಮಂಜೂರಾದ ಜಮೀನನ್ನು ಹೊರತುಪಡಿಸಿ ಅತೀಕ್ರಮ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ನಂ. 14ರಲ್ಲಿ 4 ಎಕರೆ 28 ಗುಂಟೆ ಜಮೀನು ಸರ್ಕಾರಿ ಶಾಲೆಗೆ ಸೇರಿದ ಜಮೀನು ಎಂಬ ಬಗ್ಗೆ ಸರ್ವೆ ಮಾಡಿಸಿದ ದಾಖಲೆಗಳನ್ನು ನಾನು ನನ್ನ ಮೇಲಾಧಿಕಾರಿಗಳಿಗೆ ಕೊಟ್ಟಿರುತ್ತೇನೆ.

ದಿಃ 18.07.2016ರಂದು ಸ್ಥಳಕ್ಕೆ ಪೋಲೀಸರು ಬಂದಿದ್ದರು ಅವರ ಹೆಸರು ಗೊತ್ತಿಲ್ಲ. ಮಹಜರ್ ಸಂದರ್ಭದಲ್ಲಿ ಇದ್ದ ಇತರರ ಬಗ್ಗೆಯೂ ನನಗೆ ಗೊತ್ತಿಲ್ಲ. ಸರ್ವೆ ಮಾಡಲು ಬಂದಿದ್ದ ಸರ್ವೆಯರ್ ರವರ ಹೆಸರು ಗೊತ್ತಿಲ್ಲ. ದಿಃ 18.07.2016ರಂದು ಸರ್ವೆ ಮಾಡಿದ ದಾಖಲೆಗಳನ್ನು ಪೋಲೀಸರಿಗೆ ಕೊಟ್ಟಿಲ್ಲ, ಮೇಲಾಧಿಕಾರಿಗಳಿಗೆ ಕೊಟ್ಟಿರುತ್ತೇನೆ. ನಿಪಿ-2ರಲ್ಲಿನ ವಿಚಾರಗಳು ನನಗೆ ಗೊತ್ತಿರುತ್ತದೆ. ನಿಪಿ-2ಕ್ಕೆ ಪೋಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-2 ಮಹಜರ್ ಜರುಗಿಸಲು ಬಂದಂತಹ ಸಮಯ ಸರಿಯಾಗಿ ನೆನಪಿಲ್ಲ. ಸರ್ವೆ ನಂ. 14ರ ಉತ್ತರ ಭಾಗದಲ್ಲಿ ಒತ್ತುವರಿಯಾಗಿರುತ್ತದೆ. ಸರ್ಕಾರಿ ಜಮೀನು ಒತ್ತುವರಿ ಆಗಿದೆ ಎಂದು ತೋರಿಸುವ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ. ಆರೋಪಿತರು ಜಮೀನನ್ನು ಒತ್ತುವರಿ ಮಾಡದೇ ಇದ್ದರೂ ಸುಳ್ಳು ಪ್ರಕರಣವನ್ನು ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಆರೋಪಿತರ ವಿರುದ್ಧ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನ ರೀತ್ಯ ಬೆರಳಚ್ಚುಗಾರರಿಂದ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಅದೆ**

**ಅಪರ ಸಿವಿಲ್ ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ**